<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.</u>

<u>ಸಿ.ಸಿ ನಂಬರ್: **1216/2023**</u>

<u>ಫಿರ್ಯಾದಿ</u> : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸರು,
ಮೂಡಿಗೆರೆ ತಾಲ್ಲೂಕು.

<u>ವಿರುದ್ಧ</u>

<u>ಆರೋಪಿತರು</u> : **1.** ರಕ್ಷಿತ್.ಎಲ್. ಆರ್. (**ಮೃತಪಟ್ಟಿರುತ್ತಾರೆ.**)
ಬಿನ್ ರಾಮು,
ವಯಸ್ಸು ಸುಮಾರು 24 ವರ್ಷ,
ವಾಸ: ಲಕ್ಷ್ಮೀಪುರ ಗ್ರಾಮ, ಗೋಣಿಬೀಡು ಹೋಬಳಿ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**2.** ಪೀಟರ್ ಮೋನಿಸ್ ಬಿನ್ ಸವೇರ್ ಮೋನಿಸ್,
ವಯಸ್ಸು ಸುಮಾರು 64 ವರ್ಷ,
ವಾಸ: ಅತ್ತಿಗೆರೆ ಗ್ರಾಮ.
ಹಾಲಿ ವಾಸ: ಚಕ್ಕೊಡು ಗ್ರಾಮ, ಬಣಕಲ್ ಹೋಬಳಿ,
ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**3.** ವೆಂಕಟೇಶ್.ಜಿ.ಬಿ ಬಿನ್ ಬೋಬೇಗೌಡ,
ವಯಸ್ಸು ಸುಮಾರು 58 ವರ್ಷ,
ವಾಸ: ಗುಡ್ನಟ್ಟಿ ಗ್ರಾಮ,
ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

* * * * *

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ರವರ ಹೇಳಿಕೆ</u>

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 2) ಪ್ರಾಸಾ 1 ರಾಮು.ಎಲ್.ಎ ರವರು ತಮ್ಮ ಸಾಕ್ಷ್ಯದಲ್ಲಿ ದಿ.01.07.2022 ರಂದು ಮ.2.30 ರ ಸಮಯಕ್ಕೆ ಅವರ ಮಗ ಅವರ ಮನೆಯಿಂದ ತನ್ನ ಹೋಂಡಾ ಸಿಟಿ ಬೈಕ್ ಸಂ.KA-18-EG-2544 ರಲ್ಲಿ ಬೆಳ್ಳಂಗಡಿಗೆ ಹೋಗಿಬರುತ್ತೇನೆ ಎಂದು ಹೇಳಿ ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 3) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ದಿನ ಸಂಜೆ ಅವರ ಮಗ ಅವರಿಗೆ ಕರೆ ಮಾಡಿ ತಾನು ಈ ದಿನ ಮನೆಗೆ ಬರುವುದಿಲ್ಲ ಎಂದು ಹಾಗೂ ತನ್ನ ಸ್ನೇಹಿತನ ಮನೆಯಲ್ಲಿ ಉಳಿದುಕೊಳ್ಳುತ್ತೇನೆ ಎಂದು ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 4) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.02.07.2022 ರಂದು ಸಂಜೆ ಚಾಸಾ-9 ರವರು ಅವರಿಗೆ ಫೋನ್ ಮಾಡಿ ಅವರ ಮಗನಿಗೆ ಮೂಡಿಗೆರೆ ಬಿದರಹಳ್ಳಿ ಬಸ್ ಡಿಪೋ ಬಳಿ ಅಪಘಾತವಾಗಿದೆ ಎಂದು ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 5) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಗ ಅವರು ಅವರ ಪಕ್ಕದ ಮನೆಯವರಾದ ಚಾಸಾ-2 ಮತ್ತು 13 ರವರೊಂದಿಗೆ ಕಾರಿನಲ್ಲಿ ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಅವರ ಮಗನ ಬೈಕ್ ರಸ್ತೆಯ ಕೆಳಭಾಗಕ್ಕೆ ಬಿದ್ದಿತ್ತು, ಅಲ್ಲೇ ಮರ ತುಂಬಿದ್ದ ಒಂದು ಟ್ರೈಲರ್ ಇತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 6) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಟ್ರೈಲರ್ ಗೆ ಹೊಂದಿಕೊಂಡಿದ್ದ ಟ್ರ್ಯಾಕ್ಟರ್ ಯಾವುದೇ ಸೂಚನೆ ನೀಡದ ರಸ್ತೆಯಲ್ಲಿ ಹೋಗುತ್ತಿದ್ದ ಕಾರಣ ಅತಿಯಾದ ಮಳೆಗೆ ಮಂಜು ಕವಿದು ಅವರ ಮಗನಿಗೆ ಟ್ರ್ಯಾಕ್ಟರ್ ಕಾಣದೇ ಡಿಕ್ಕಿ ಪಡಿಸಿರುವುದಾಗಿ ಅಲ್ಲಿದ್ದ ಸ್ಥಳೀಯರು ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 7) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅವರ ಮಗ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಅವರನ್ನು ಸ್ಥಳೀಯರು ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಆ ದಿನ ರಾ.11.45 ರ ಸಮಯಕ್ಕೆ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 8) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆಸ್ಪತ್ರೆಯಲ್ಲಿ ಅವರ ಮಗನ ಶವಪಂಚನಾಮೆ ಮಾಡಿದ್ದು, ಆಗ ಚಾಸಾ-3 ಮತ್ತು 4 ರವರು ಇದ್ದರು, ಆನಂತರ ಪೋಲಿಸರು ಅಪಘಾತ ಸ್ಥಳದ ಮಹಜರ್ ಮಾಡಿದ್ದು, ಸ್ಥಳವನ್ನು ಅವರೇ ತೋರಿಸಿದ್ದು, ಆನಂತರ ಅವರ ಮಗನ ವಾಹನವನ್ನು

ಠಾಣೆಯಿಂದ ಬಿಡಿಸಿಕೊಂಡು ಬಂದಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 9) ಪ್ರಾಸಾ 2 ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.02.07.2022 ರಂದು ಮೃತ ರಕ್ಷಿತ್ ರವರಿಗೆ ಬಿದರಹಳ್ಳಿಯ KSRTC ಡಿಪೋ ಬಳಿ ಅಪಘಾತವಾಗಿದ್ದ ಸಂಬಂಧ ದಿ.04.07.2022 ರಂದು ತನ್ನನ್ನು ಸದರಿ ಸ್ಥಳಕ್ಕೆ ಮಹಜರ್ ಗೆಂದು ಕರೆದುಕೊಂಡು ಹೋಗಿ ನಂತರ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದು ನಿಪಿ-3 ಕ್ಕೆ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 10) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಟಿಂಬರ್ ತುಂಬಿದ ಟ್ರ್ಯಾಲಿಯು ಯಾವುದೇ ಸೂಚನೆ ಇಲ್ಲದೇ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿದ್ದಾಗ ಕೊಟ್ಟಿಗೆಹಾರದಿಂದ KA-18-EG-2544 ಹೊಂಡಾ ಶೈನ್ ಬೈಕ್ ನಲ್ಲಿ ಬರುತ್ತಿದ್ದ ರಕ್ಷಿತ್ ಆ ಟ್ರ್ಯಾಲಿಗೆ ಗುದ್ದಿಸಿ ಅಪಘಾತವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 11) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ವಿಚಾರವನ್ನು ಅವರ ಊರಿನ ಮದನ್ ರವರು ರಾತ್ರಿ 9.45 ರ ಸಮಯಕ್ಕೆ ತನಗೆ ಪೋನ್ ಮಾಡಿ ತಿಳಿಸಿದ್ದರು, ನಂತರ ಅವರು ಪದ್ಮೇಗೌಡ ಎನ್ನುವವರೊಂದಿಗೆ ಚಾಸಾ-1 ರವರ ಮನೆಗೆ ಹೋಗಿ ಅವರನ್ನು ಕರೆದುಕೊಂಡು ಅಪಘಾತ ಸ್ಥಳಕ್ಕೆ ಹೋಗಿದ್ದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 12) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸ್ಥಳದಲ್ಲಿ ಟ್ರ್ಯಾಲಿಯ ಹಿಂಭಾಗದಲ್ಲಿ ಬೈಕ್ ಬಿದ್ದಿತ್ತು. ಟ್ರ್ಯಾಲಿಯ ಮೇಲೆ ಯಾವುದೇ ನೋಂದಣಿ ಸಂಖ್ಯೆ ಇರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 13) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಗೆ ಬಂದು ಅಲ್ಲಿ ಶವಗಾರದಲ್ಲಿ ಇದ್ದ ರಕ್ಷಿತ್ ರವರ ಮೃತ ದೇಹವನ್ನು ಗುರುತಿಸಿ ನಂತರ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ಚಾಸ-1 ರವರ ಮೂಲಕ ದೂರು ದಾಖಲಿಸಿದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆ: 14) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮರುದಿನ ಸ್ಥಳಕ್ಕೆ ಹೋಗಿ ನೋಡಿದಾಗ ಅಪಘಾತ ಸ್ಥಳದ 50-60 ಅಡಿ ಮುಂದೆ ಒಂದು ಟ್ರ್ಯಾಕ್ಟರ್ ಇಂಜಿನ್ ನಿಂತಿದ್ದು ಅದರ ನೋಂದಣಿ ಸಂಖ್ಯೆ KA-18-TB-2393 ಆಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 15) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮರುದಿನ ಪೋಲಿಸರು ಸ್ಥಳ ಮಹಜರ್ ಗೆಂದು ಚಾಸಾ-1 ರವರನ್ನು ಕರೆದಿದ್ದು ತಾನು ಅವರೊಂದಿಗೆ ಹೊಗಿದ್ದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 16) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪೋಲಿಸ್ ಠಾಣೆಯ ಬಳಿ ಕರೆದುಕೊಂಡು ಬಂದು ಟ್ರ್ಯಾಕ್ಟರ್ ಮತ್ತು ಬೈಕ್ ನ ಮುಂದೆ ಪೋಟೋ ತೆಗೆದು ಬೈಕನ್ನು ಪೋಲಿಸರು ವಶಕ್ಕೆ ಪಡೆದರು ಹಾಗೂ ಯಾವುದೇ ಸೂಚನೆ ಫಲಕ ಹಾಕದೇ ಟ್ರ್ಯಾಕ್ಟರ್ ಮತ್ತು ಟ್ರ್ಯಾಲಿಯನ್ನು ರಸ್ತೆಯಲ್ಲಿ ನಿಲ್ಲಿಸಿದ್ದ ಕಾರಣ ಅಪಘಾತವಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 17) ಪ್ರಾಸಾ 3 ಮಧನ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.02.07.2022 ರಂದು ರಾ.9.30 ಕ್ಕೆ ಅವರಿಗೆ ಒಂದು ಪೋನ್ ಕಾಲ್ ಬಂದಿದ್ದು, ರಕ್ಷಿತ್ ರವರ KA-18-EG-2393 ವಾಹನ ಬಿದರಹಳ್ಳಿಯಲ್ಲಿ ಟಿಂಬರ್ ತುಂಬಿದ ಟ್ರ್ಯಾಕ್ಟರ್ ಟ್ರೈಲರ್ ಸಂ.KA-18-EG-2544 ಗೆ ಡಿಕ್ಕಿಯಾಗಿ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 18) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಚಾಸಾ-2 ರವರಿಗೆ ಕರೆ ಮಾಡಿ ಸದರಿ ವಿಚಾರವನ್ನು ತಿಳಿಸಿ, ನಂತರ ಚಾಸಾ-2 ರವರು ಚಾಸಾ-1 ಮತ್ತು 13 ರವರನ್ನು ಕರೆದುಕೊಂಡು ಬಿದರಹಳ್ಳಿಗೆ ಹೋಗಿ ನೋಡಿದ್ದು ಅಪಘಾತ ಸ್ಥಳದಲ್ಲಿ ರಕ್ಷಿತ್ ರವರು ಇರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 19) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆದರೆ ಸಾರ್ವಜನಿಕರು ರಕ್ಷಿತ್ ರವರು ಮೃತ ಪಟ್ಟಿದ್ದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದು, ಅವರು

ರಾ.10.30 ರ ಸಮಯಕ್ಕೆ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ಅಲ್ಲಿ ಚಾಸಾ-1 ರವರು ಮೃತ ರಕ್ಷಿತ್ ರವರ ಮೃತದೇಹವನ್ನು ನೋಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 20) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆನಂತರ ಚಾಸಾ-1 ರವರು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿ, ದಿ.04.07.2022 ರಂದು ಪೋಲಿಸರು ಅವರಿಗೆ ಕರೆ ಮಾಡಿ ಸ್ಥಳ ಮಹಜರ್ ಗೆ ಕರೆದಿದ್ದು ಅವರು, ಚಾಸಾ-10, 1 ಮತ್ತು 2 ರವರು ಅಪಘಾತ ಸ್ಥಳಕ್ಕೆ ಹೋಗಿದ್ದು ಅಲ್ಲಿ ಸ್ಥಳಮಹಜರ್ ಬರೆದು ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 21) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಹಜರ್ ಕಾಲಕ್ಕೆ ಚಾಸಾ-1 ರವರು ಸ್ಥಳವನ್ನು ತೋರಿಸಿದ್ದು, ಟಿಂಬರ್ ಲೋಡ್ ತುಂಬಿಸಿದ್ದ ಟ್ರ್ಯಾಕ್ಟರ್ ಮತ್ತು ಟ್ರೈಲರ್ ನ್ನು ನಿರ್ಲಕ್ಷ್ಯತನದಿಂದ ರಸ್ತೆಯಲ್ಲಿ ನಿಲ್ಲಿಸಿದ್ದ ಕಾರಣ ಅಪಘಾತವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 22) ಪ್ರಾಸಾ 4 ಸತ್ಯನಾರಾಯಣ ರವರು ತಮ್ಮ ಸಾಕ್ಷ್ಯದಲ್ಲಿ ದಿ.08.08.2022 ರಂದು ಪ್ರಕರಣದ ಕಡತವನ್ನು ಚಾಸಾ-23 ರವರಿಂದ ಸ್ವೀಕರಿಸಿಕೊಂಡು ತನಿಖೆ ಮುಂದುವರೆಸಿ, ದಿ.11.08.2022 ರಂದು ಚಾಸಾ-13 ರಿಂದ 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 23) ಪ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದಲ್ಲಿ ವಶಕ್ಕೆ ಪಡೆಯಲಾಗಿದ್ದ KA-18-TB-2393 ಟ್ರಾಕ್ಟರ್ ವಾಹನದ ಮಾಲೀಕರಾದ 3 ನೇ ಆರೋಪಿಗೆ ನೋಟೀಸು ಜಾರಿ ಮಾಡಿ, ದಿ.28.09.2022 ರಂದು ಸದರಿ ಟ್ರಾಕ್ಟರ್ ವಾಹನ ಹಾಗೂ ವಶಕ್ಕೆ ಪಡೆಯಲಾಗಿದ್ದ KA-18-EG-2544 ಮೋಟಾರ್ ಸೈಕಲ್ ನ್ನು IMV ತಪಾಸಣೆಗೆಂದು ಚಾಸಾ-17 ರವರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 24) ಪ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.10.10.2022 ರಂದು IMV ಪರೀಕ್ಷೆ ನಡೆಸಿದ ಬಗ್ಗೆ ಇಂಟಿಮೇಷನ್ ಸ್ವೀಕರಿಸಿ, ದಿ.05.11.2022 ರಂದು 3 ನೇ ಆರೋಪಿಯಿಂದ ಉತ್ತರ ಹಾಗೂ ದಾಖಲೆಗಳನ್ನು ಸ್ವೀಕರಿಸಿ, 3 ನೇ ಆರೋಪಿಗೆ ತನಿಖೆಗೆ ಸಹಕರಿಸುವಂತೆ ಸೂಚಿಸಿ ನೋಟೀಸು ಜಾರಿ ಮಾಡಿ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 25) ಪ್ರಾಸಾ 5 ಸೋಮಶೇಖರ್.ಜೆ.ಸಿ ರವರು ತಮ್ಮ ಸಾಕ್ಷ್ಯದಲ್ಲಿ ದಿ.03.07.2022 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-22 ರವರಿಂದ ಸ್ವೀಕರಿಸಿ, ಅದೇದಿನ ಅವರು ಬೇರೊಂದು ಪ್ರಕರಣದ ತನಿಖೆಯಲ್ಲಿ ತೊಡಗಿದ್ದ ಕಾರಣ ಮೃತರ ಶವ ಮಹಜರ್ ಮಾಡಿಕೊಂಡು ಬರುವಂತೆ ಚಾಸಾ-22 ರವರಿಗೆ ನಿರ್ದೇಶನ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 26) ಪ್ರಾಸಾ 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇದಿನ ಚಾಸಾ-22 ರವರು ತಮ್ಮ ವರದಿಯೊಂದಿಗೆ ಶವಪಂಚನಾಮೆ ಮತ್ತು ದಾಖಲೆಗಳನ್ನು ಹಾಜರುಪಡಿಸಿದ್ದನ್ನು ಸ್ವೀಕರಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 27) ಪ್ರಾಸಾ 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.04.07.2022 ರಂದು ಘಟನಾ ಸ್ಥಳವಾದ ಬಿದರಹಳ್ಳಿ KSRTC ಡಿಪೋ ಬಳಿ ತಲುಪಿ ಅಲ್ಲಿ ಹಾಜರುಸಿಕ್ಕ ಚಾಸಾ-9 ಮತ್ತು 10 ರವರನ್ನು ನಿಯಮಾನುಸಾರ ಪಂಚರಾಗಿ ನೇಮಕ ಮಾಡಿಕೊಂಡು ಅಲ್ಲಿ ಚಾಸಾ-1 ರವರು ಸ್ಥಳ ತೋರಿಸಿದಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ ನಕ್ಷೆ ಬರೆದು ಪೋಟೋ ತೆಗೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 28) ಪ್ರಾಸಾ 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇದಿನ ಚಾಸಾ-2 ಮತ್ತು 9 ರವರ ಹೇಳಿಕೆಯನ್ನು ದಾಖಲಿಸಿಕೊಂಡು, ಆ ದಿನ ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿ, ದಿ.08.08.2022 ರಂದು ಚಾಸಾ-1 ಮತ್ತು 2 ನೇ ಆರೋಪಿಗೆ ನೋಟೀಸು ಜಾರಿ ಮಾಡಿ ವಾಹನಗಳ ಅಮಾನತ್ತು ಮಹಜರ್ ಸಲುವಾಗಿ ಸಹಕರಿಸಲು ತಿಳಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆ: 29) ಪ್ರಾಸಾ 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿರವರು ಠಾಣೆಗೆ ಹಾಜರಾದ ಮೇರೆಗೆ ಆ ದಿನ ಚಾಸಾ-2 ಮತ್ತು 10 ರವರನ್ನು ನಿಯಮಾನುಸಾರ ಪಂಚರನ್ನಾಗಿ ನೇಮಕ ಮಾಡಿಕೊಂಡು ಅವರ ಸಮಕ್ಷಮ ಮೂಡಿಗೆರೆ ಪೋಲಿಸ್ ಠಾಣಾ ಆವರಣದಲ್ಲಿ ನಿಲ್ಲಿಸಿದ್ದ KA-18-EG-2544 ಹೋಂಡಾ ಶೈನ್ ಹಾಗೂ KA-18-TB-2393 ಜಾಂಡೀರ್ ಟ್ರಾಕ್ಟರ್ ನ್ನು ವಶಕ್ಕೆ ಪಡೆದು ಫೋಟೋಗಳನ್ನು ತೆಗೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 30) ಪ್ರಾಸಾ 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಾಹನಗಳನ್ನು PF.115/2022 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡು, ಆ ದಿನ ತಾಲ್ಲೂಕು ಕಚೇರಿ ಆವರಣದಲ್ಲಿ ನಿಲ್ಲಿಸಿದ್ದ KA-18-TB-2393 ನೋಂದಣಿ ಸಂಖ್ಯೆಯ ಜಾಂಡೀರ್ ಟ್ರಾಕ್ಟರ್ ನ ಟ್ರೈಲರ್ ನ್ನು ಪಂಚರ ಸಮಕ್ಷಮ ಮಹಜರ್ ಮುಖೇನ ವಶಕ್ಕೆ ಪಡೆದು, ಅದನ್ನು PF.116/2022 ರಲ್ಲಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 31) ಪ್ರಾಸಾ 6 ಆದರ್ಶ್.ಎಂ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.03.07.2022 ರಂದು ಚಾಸಾ-23 ರವರ ಆದೇಶದಂತೆ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಅಲ್ಲಿ ಶವಗಾರದಲ್ಲಿ ಇರಿಸಿದ್ದ ಮೃತ ರಕ್ಷಿತ್ ರವರ ಮೃತ ದೇಹದ ಶವಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಬೆ.6.30 ರಿಂದ 8.50 ರವರೆಗೂ ಜರುಗಿಸಿ ಫೋಟೊ ತೆಗೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 32) ಪ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದೇದಿನ ಮೃತರ ಸಂಬಂಧಿಕರಾದ ಚಾಸಾ-5 ಮತ್ತು 6 ರವರ ಹೇಳಿಕೆಯನ್ನು ದಾಖಲಿಸಿ, ಅದೇದಿನ ಚಾಸಾ-7 ಮತ್ತು 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರ:

ಪ್ರಶ್ನೆ: 33) ಪ್ರಾಸಾ 6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮೃತ ದೇಹವನ್ನು ಚಾಸಾ-20 ರವರ ಹಸ್ತ ಮರಣೋತ್ತರ ಪರೀಕ್ಷೆಗೆ ಕಳುಹಿಸಿಕೊಟ್ಟು, ಅದಾದ ನಂತರ ಮೃತ ದೇಹವನ್ನು ಚಾಸಾ-1 ರವರಿಗೆ ಹಸ್ತಾಂತರಿಸಿ ರಶೀದಿ ಪಡೆದು, ಸದರಿ ದಾಖಲೆಗಳೊಂದಿಗೆ ಠಾಣೆಗೆ ಹಾಜರಾಗಿ ಅವುಗಳನ್ನು

ವರದಿಯೊಂದಿಗೆ ಚಾಸಾ-23 ರವರಿಗೆ ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 34) ಪ್ರಾಸಾ 7 ಗುರುರಾಜ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.02.07.2022 ರಂದು ನಾನು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ರಾ.11.45 ರ ಸಮಯಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಕೊಟ್ಟ ದೂರನ್ನು ಸ್ವೀಕರಿಸಿ, ಠಾ.ಮೊ.ಸಂ.113/2022 ರಂತೆ ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿ, ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-23 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 35) ಪ್ರಾಸಾ 8 ಅಜಿತ್.ಎಲ್.ಆರ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.04.07.2021 ರಂದು ಪೋಲಿಸರು ತನಗೂ ಮತ್ತು ಚಾಸಾ-9 ರವರಿಗೂ ಮಹಜರ್ ಇದೆ ಎಂದು ಕರೆ ಮಾಡಿದ್ದು, ಅದೇ ದಿನ ಮ.2.30 ರಿಂದ 3.30 ರವರೆಗೆ ಮಹಜರ್ ಕ್ರಮವನ್ನು ಡಿಪೋ ಮುಂಭಾಗ ಜರುಗಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 36) ಪ್ರಾಸಾ 8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ದಿನ ಚಾಸಾ-1 ರವರು ಸ್ಥಳವನ್ನು ತೋರಿಸಿದ್ದು, ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆದು, ದಿ.08.08.2022 ರಂದು KA-18-EG-2544 ಎಂಬ ಹೊಂಡಾ ಶೈನ್ ಬೈಕ್ ಮತ್ತು KA-18-TB-2393 ಎಂಬ ಟ್ರಾಕ್ಟರ್ ವಾಹನವನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 37) ಪ್ರಾಸಾ 8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ತಾಲ್ಲೂಕು ಕಛೇರಿಯ ಬಳಿ ಇನ್ನೊಂದು ಮಹಜರ್ ನ್ನು ಜರುಗಿಸಿ, ಸದರಿ ಸ್ಥಳದಿಂದ ಒಂದು ಟ್ರಾಕ್ಟರ್ ಟ್ರೆಲರ್ ನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 38) ಪ್ರಾಸಾ 9 ಸೋಮೇಗೌಡ.ಪಿ.ಪಿ ರವರು ದಿ.11.11.2022 ರಂದು ಪ್ರಕರಣದ ಕಡತವನ್ನು ಚಾಸಾ-24 ರವರಿಂದ ಪಡೆದು, ದಿ.19.11.2022 ರಂದು ಚಾಸಾ-16 ರವರಿಂದ ಮೃತ

ರಕ್ಷಿತ್ ರವರ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ ತಮ್ಮ ಸಾಕ್ಷ್ಯದಲ್ಲಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 39) ಪ್ರಾಸಾ 9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-1 ರವರ ಮೃತ ರಕ್ಷಿತ್ ರವರ ಹೆಸರಿನಲ್ಲಿ ಇರುವ ವಾಹನವನ್ನು ಬಿಡಿಸಿಕೊಳ್ಳುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿ, ನಂತರ ಅವರಿಂದ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ಪಡೆದು ವಾಹನದ ದಾಖಲಾತಿಯನ್ನು ಪರಿಶೀಲಿಸಿ ಅವರಿಗೆ ಹಸ್ತಾಂತರಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 40) ಪ್ರಾಸಾ 9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.01.05.2023 ರಂದು ಚಾಸಾ-21 ರವರಿಂದ ಕಲಂ 65 ಬಿ ರಡಿಯ ಪ್ರತಿಯನ್ನು ಪಡೆದು, ಅದೇ ದಿನ ಚಾಸಾ-17 ರವರಿಂದ IMV ವರದಿಯನ್ನು ಪಡೆದು, ನಂತರ ಪ್ರಕರಣದ ತನಿಖೆಯು ಪೂರ್ಣಗೊಂಡಿದ್ದು ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 41) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

2 ಮತ್ತು 3 ನೇ ಆರೋಪಿತರ ಉತ್ತರಃ

ಪ್ರಶ್ನೆಃ 42) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

2 ಮತ್ತು 3 ನೇ ಆರೋಪಿತರ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-
C/c ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ.
ದಿನಾಂಕಃ 27.02.2026.

2 ನೇ ಆರೋಪಿಯ ಸಹಿ

3 ನೇ ಆರೋಪಿಯ ಸಹಿ